

**ಎಡದಿಂದ ಬಲಕ್ಕೆ:**

1. ಪ್ರತಿನಿಧಿಯ ಸ್ವರ ಮತ್ತೆ ಮತ್ತೆ ಕೇಳಿಸಿತು (4)
3. ಗಾಬರಿಯಲ್ಲಿ ಏನೇನೋ ಗದ್ದಲ, ಗಲಾಟೆ (3)
7. ಪ್ರಾಣನಷ್ಟ, ಜೊತೆಗೆ ಬೇನೆ (4)
8. ಗಂಭೀರ ನಡೆ ನೋಡಿ–ಒಡವನಾದರೇನು? (3)
9. ಲಾಗ ಹಾಕಿ ಹಾಕಿ ವಿಜಯ ಗಳಿಸು (2)
12. ಖಳನನ್ನು ಮೃದುಗೊಳಿಸಿ ಎಳೆದು ತಿರುವಿದರೆ, ಅದೂ ಕರಾಳ (2)
14. ಕಾವಲು ನಿಂತವನ ಕೈಯಲ್ಲಿ ಕೋಲು ಟಿಸಿಲು (3)
15. ವರ್ಷಕ್ಕೊಮ್ಮೆ ಬರುತ್ತದಲ್ಲ ಮಳೆಗಾಲ? (4)
17. ಠಕ್ಕನಿಗೆ ಈತ ತುಂಬ ಹತ್ತಿರದವ (3)
18. ನಿತ್ಯದ ಖರ್ಚಿಗೆಂದು ವಿಶೇಷ ಸಂಭಾವನೆ (4)

**ಮೇಲಿಂದ ಕೆಳಕ್ಕೆ:**

1. ಸುಪ್ರಭಾತದಲ್ಲೊಂದು ದಿವ್ಯ ಜ್ಯೋತಿ (2)
2. ದಾವಣಗೆರೆಯಲ್ಲಿ ಓಡಾಡಿ ಭಾರೀ ಸುಸ್ತು (3)
4. ಬಗಲಿಗೆ ಗುಲಾಬಿ ತುಂಬಿ ಬೇಗ ಬೇಗ (4)
5. ಹಗೇವಿಗೆ ಇಳಿಯಲು ಒಪ್ಪವಾದ ಚಪ್ಪಲಿ ನೋಡಿ (3)
6. ಸಂಗೀತ ಧ್ವನಿ. ಜೊತೆಗೆ ಲಯ (4)
10. 'ಹಸುಳೆಯ ದಂತ'– ತಲೆ ಕೆಳಗು (4)
11. ಆಕೆ ಮುಸುಕು ಹಾಕಿದ್ದು ತುಂಬ ಅನಿರೀಕ್ಷಿತ (4)
13. ಕೋಲು ಹಿಡಿದು ಕಾಯುವ ಕೆಲಸ (3)
16. ಕಳ್ಳನನ್ನು ಕಂಡದ್ದು ಇದೇ ಕಾಡಿನಲ್ಲೇ (3)
17. ತನ್ನದೇ ಚಿಂತೆ ಪ್ರತಿ ದಿನವೂ (2)

## ಪದಬಂಧ: 24-2-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಬಕಾರ; 3. ಕಲಹ; 4. ಗಳಿಸು; 6. ಜಡಿಮಳೆ; 7. ಅಂದುಗೆ; 9. ಅನತಿ; 11. ರಕ್ಷಿಸಿ; 13. ಗಡುವು; 15. ವಾನಪ್ರಸ್ಥ; 17. ಜನುಮ; 18. ಗಿರಾಕಿ; 19. ನಚಿಕೇತ.

ಮೇಲಿಂದ ಕೆಳಕ್ಕೆ:

1. ಸಹಜ; 2. ರಗಳೆ; 3. ಕರಿದು; 5. ಸುದಿನ; 7. ಅಂಬರ; 8. ಗೆರಸಿ; 9. ಅಣುಗ; 10. ತಿಳಿವು; 12. ಕ್ಷಿತಿಜ; 14. ಡುರುಕಿ; 15. ವಾಮನ; 16. ಸ್ಥಗಿತ.

# ಮತ್ಸ್ಯಸೋಜಿಗ

### 'ಅತ್ಯಂತ ಬೃಹತ್ ಮತ್ಸ್ಯ' ಯಾವುದು?

ಧರೆಯ ಅತ್ಯಂತ ಬೃಹತ್ ಮತ್ಸ್ಯದ ತೂಕ ಗಾತ್ರಗಳು ಕಲ್ಪನೆಗೂ ಸುಲಭವಾಗಿ ಎಟುಕುವುದಿಲ್ಲ. ಅದರದು ಅರವತ್ತೈದು ಅಡಿ ಉದ್ದ (19.7 ಮೀಟರ್); ಮೂವತ್ತೇಳು ಟನ್ ತೂಕ! ಸ್ಪಷ್ಟವಾಗಿಯೇ ಇದು 'ತಿಮಿಂಗಿಲ ಸದೃಶ ಅಳತೆ' ಹೌದಲ್ಲ? ಆದ್ದರಿಂದಲೇ ಆ ಮತ್ಸ್ಯ ಪ್ರಭೇದಕ್ಕೆ 'ತಿಮಿಂಗಿಲ ಮೀನು' ಎಂದೇ (ವ್ಹೇಲ್ ಶಾರ್ಕ್) ಎಂದೇ ಹೆಸರು.

ಧರೆಯ ಜೀವಜಾಲದಲ್ಲಿ ಮತ್ಸ್ಯವರ್ಗ ಉಗಮಗೊಂಡದ್ದು ಈಗ್ಗೆ ಮುನ್ನೂರ ಐವತ್ತು ದಶಲಕ್ಷ ವರ್ಷ ಹಿಂದೆ. ಪ್ರಸ್ತುತ ಧರೆಯ ಮತ್ಸ್ಯ ಸಾಮ್ರಾಜ್ಯದಲ್ಲಿ ಸುಮಾರು ಮೂವತ್ತು ಸಾವಿರ ಪ್ರಭೇದಗಳಿವೆ. ಶೇಕಡ ನಲವತ್ತೊಂದು ಪ್ರಭೇದಗಳು ಸಿಹಿನೀರಿನ ನೆಲೆಗಳನ್ನು– ಎಂದರೆ ನದಿ, ಸರೋವರ, ಕೆರೆ ಇತ್ಯಾದಿ ಆಶ್ರಯಿಸಿವೆ. ಉಳಿದೆಲ್ಲವೂ ಕ್ಷಾರಜಲಾವಾದವನ್ನು– ಎಂದರೆ ಕಡಲನ್ನು– ಆಶ್ರಯಿಸಿವೆ. ವ್ಹೇಲ್ ಶಾರ್ಕ್ ಎರಡನೆಯ ಗುಂಪಿನಲ್ಲಿದೆ. ಸಸ್ತನಿ ವರ್ಗದ ತಿಮಿಂಗಿಲಗಳಿಗೂ ಮತ್ಸ್ಯ ವರ್ಗದ ವ್ಹೇಲ್ ಶಾರ್ಕ್‌ಗೂ ಜೈವಿಕವಾಗಿ ಯಾವ ಸಂಬಂಧವೂ ಇಲ್ಲ. ಭಾರೀ ಗಾತ್ರ ಮತ್ತು ಸಾಗರವಾಸ– ಇವೆರಡೇ ಅವುಗಳ ನಡುವಣ ಸಾಮ್ಯ.

ಶಾರ್ಕ್‌ಗಳು ಉಗ್ರ ಬೇಟೆಗಾರ ಮೀನುಗಳು. ಆದರೆ ಅತ್ಯಂತ ಭಾರೀ ಶಾರ್ಕ್ ಆಗಿದ್ದರೂ ವ್ಹೇಲ್ ಶಾರ್ಕ್‌ನದು ತುಂಬ ಸಾಧು ಸ್ವಭಾವ. ಕಡಲ ನೀರಲ್ಲಿ ಧಾರಾಳ ಸಂಖ್ಯೆಯಲ್ಲಿರುವ ಅತಿ ಸೂಕ್ಷ್ಮಗಾತ್ರದ ಸಸ್ಯಗಳು ಮತ್ತು ಪ್ರಾಣಿಗಳೇ (ಪ್ಲಾಂಕ್ಟನ್ ಜೀವಿಗಳು) ವ್ಹೇಲ್ ಶಾರ್ಕ್‌ಗಳ ಆಹಾರ. ತಾಸಿಗೆ ಗರಿಷ್ಠ ಐದು ಕಿ.ಮೀ. ವೇಗದಲ್ಲಿ ಈಜುವ ವ್ಹೇಲ್ ಶಾರ್ಕ್‌ಗಳದು ಸದಾ ಪ್ರಶಾಂತ ಜೀವನ.

ಹಾಗಿದ್ದರೂ ವ್ಹೇಲ್ ಶಾರ್ಕ್‌ಗಳ ಬಾಯಿಯದು ಅಸಾಧಾರಣ. ಅದರ ಬಾಯಿ ಐದು ಅಡಿ ಅಗಲವಿದ್ದು ಒಂದರ ಹಿಂದೊಂದು ಒಟ್ಟು ಮುನ್ನೂರೈವತ್ತು ಸಾಲು ಹಲ್ಲುಗಳನ್ನು ಹೊಂದಿದೆ. ಬಹುಪಾಲು ಕಂದು–ನೀಲಿ ಮಿಶ್ರಿತ ಬಣ್ಣದ



ನಾಲ್ಕಂಗುಲ ದಪ್ಪದ ಚರ್ಮ– ಅದರ ಮೇಲೆಲ್ಲ ಬಿಳಿ ಚುಕ್ಕಿ ಚಿತ್ತಾರ; (ಚಿತ್ರ ನೋಡಿ) ಹೊಟ್ಟೆ ಭಾಗ ಮಾತ್ರ ಬಿಳಿವರ್ಣ.

ವಿಪರ್ಯಾಸ ಏನೆಂದರೆ ದೈತ್ಯ ಗಾತ್ರದ ದಾಖಲೆ ಸ್ಥಾಪಿಸಿದ್ದರೂ ವ್ಹೇಲ್ ಶಾರ್ಕ್‌ಗಳ ಒಟ್ಟು ಸಂಖ್ಯೆಯಾಗಲೀ, ಅವು ಸಂತಾನ ವರ್ಧಿಸಿಕೊಳ್ಳುವ ಸಾಗರ ನೆಲೆಗಳಾಗಲೀ, ಅವುಗಳ ವಲಸೆ ಹಾದಿಗಳೇ ಆಗಲೀ ಯಾವುದೂ ಇನ್ನೂ ತಿಳಿದಿಲ್ಲ. ಸಾಧು ದೈತ್ಯ ಮತ್ಸ್ಯವಾಗಿ ಹಾಗಾಗಿಯೇ ಕಂಡಲ್ಲೆಲ್ಲ ಮನುಷ್ಯರಿಗೆ ಬಲಿಯಾಗಿ ಅಲ್ಪಸಂಖ್ಯೆಯಲ್ಲಿ ಉಳಿದಿದೆ ಎಂಬುದೊಂದೇ ಈಗ ನಿಚ್ಚಳ.

■ ಎನ್.ವಾಸುದೇವ್